## ಧಾರಾವಾಹಿ ‘ಗೀತಾ’

ಸಾಮಾನ್ಯವಾಗಿ ನಮ್ಮ ಟೀವಿ ಧಾರಾವಾಹಿಗಳಲ್ಲಿ ಮಹಿಳಾ ಪಾತ್ರಧಾರಿಗಳ ಅಬ್ಬರ ಮತ್ತು ಒಂದು ಸಂಸಾರಕ್ಕೆ ಅವರೇ ಶೋಷಕರು ಎಂಬಂತೆ ಬಿಂಬಿಸಿರುತ್ತಾರೆ. ಇದಕ್ಕೆ ಸ್ವಲ್ಪ ಬದಲಾದ ರೀತಿಯಲ್ಲಿ ‘ಗೀತಾ’ ಧಾರಾವಾಹಿಯ ಕೆಲವು ಪಾತ್ರಗಳಿವೆ. ಮೊದಲನೆಯದಾಗಿ ಒಬ್ಬ ಅನುಭವಿ ನಟನಿಂದ ಹೆಣ್ಣುಕುಲವನ್ನೇ ದ್ವೇಷ ಮಾಡುತ್ತಾ ವಿಷಪೂರಿತ ಸಂಭಾಷಣೆಗಳನ್ನು ಹೇಳಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವೆಂಬಂತೆ ಒಬ್ಬ ರಾಜಕಾರಣಿಯ ಪಾತ್ರ. ಈ ರಾಜಕಾರಣಿ ಇದರಲ್ಲಿ ತಪ್ಪು ಮಾಡಿದ ತನ್ನ ಮಗನನ್ನೇ ಶಿಕ್ಷಿಸಿ ಆತನಿಂದ ತೊಂದರೆಗೊಳಗಾದ ಹೆಣ್ಣು ಮಗಳಿಗೆ ಅಭಯ ನೀಡುತ್ತಾನೆ. ನಮ್ಮ ನಿಜ ಜೀವನದಲ್ಲಿ ಇಂತಹ ರಾಜಕಾರಣಿಗಳು ಇದ್ದಾರೆಯೇ ಎಂಬ ಪರಿಸ್ಥಿತಿಯಲ್ಲಿ ಈ ಪಾತ್ರ ಪೋಷಣೆ ವಿಭಿನ್ನವಾಗಿದ್ದು ಇಂತಹ ವ್ಯಕ್ತಿತ್ವದವರನ್ನು ಪರದೆಯ ಮೇಲಾದರೂ ನೋಡುತ್ತಿದ್ದೇವೆಂಬ ತೃಪ್ತಿ ನನ್ನಂತಹ ಅಸಂಖ್ಯ ನೋಡುಗರಿಗೆ ತರುತ್ತಿದೆ. ಇದು ಮುಂದಿನ ದಿನಗಳಲ್ಲಿ ಯಾವ ರೀತಿಯ ತಿರುವು ತೆಗೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕು.

—ಉಷಾ ಎಸ್., ಬೆಂಗಳೂರು

## ಮಾಧ್ಯಮಗಳ ಗಮನಕ್ಕೆ!

ಕೊರೊನಾ ವಿಚಾರವಾಗಿ ಜನರಿಗೆ ಜೀವಭಯ ಮೂಡಿಸಿರುವ ಸುದ್ದಿ ಮಾಧ್ಯಮಗಳು ಮದ್ಯಪಾನ, ಧೂಮಪಾನ, ಗುಟ್ಕಾ ಮೊದಲಾದ ದುಶ್ಚಟಗಳ ದಾಸರಾಗಿರುವ ಮಂದಿಗೂ ವಾಸ್ತವವನ್ನು ತಿಳಿಸಿ ಅವರಲ್ಲಿ ಜೀವ ಕಾಳಜಿಯನ್ನು ಹುಟ್ಟಿಸಿ ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾಗಿ ಮನವಿ!

—ಪಿ.ಜೆ. ರಾಘವೇಂದ್ರ ಮೈಸೂರು

### ವಾರದ ಪತ್ರ

## ಸಾರ್ಥಕ ಹಾದಿಗಲ್ಲು



ಚಂದನ ವಾಹಿನಿಯಲ್ಲಿ ಹಿರಿಯ ಪತ್ರಕರ್ತರೂ ಹಾಗೂ ಕನ್ನಡಪರ ಹೋರಾಟಗಾರ ಪಾಟೀಲ ಪುಟ್ಟಪ್ಪ ಸಂದರ್ಶನದ ಮುದ್ರಿತ ಭಾಗವನ್ನು ಮರುಪ್ರಸಾರ ಮಾಡಲಾಯಿತು. ಸದರಿ ಸಂದರ್ಶನದಲ್ಲಿ ಪಾಟೀಲರು ತಮ್ಮ ಹೋರಾಟದ ಬದುಕಿನ ಬಗ್ಗೆ ಮತ್ತು ಪತ್ರಿಕಾ ರಂಗದಲ್ಲಿ ಅವರು ನಡೆದು ಬಂದ ದಾರಿ ರೋಚಕ ಎಂದೆನಿಸಿತು. 2011ರಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕನ್ನಡ ನಾಡು ನುಡಿಯ ವಸ್ತು ಸ್ಥಿತಿ ಮತ್ತು ಅದರ ಉಳಿವಿಗಾಗಿ ಸರ್ಕಾರ ಕೈಕೊಳ್ಳಬೇಕಾದ ಕ್ರಮಗಳ ವಿವರಣೆ ಕೇಳಿ ಮುಖ್ಯಮಂತ್ರಿ ಚಕಿತರಾಗಿದ್ದು ಇಂದಿಗೂ ಸ್ಮೃತಿ ಪಟಲದಲ್ಲಿ ಉಳಿದಿದೆ. ಒಬ್ಬ ಹಿರಿಯ ಪತ್ರಕರ್ತರು ದಿವಂತರಾಗಿದ್ದ ಸಂದರ್ಭದಲ್ಲಿ ಅವರ ಸಂದರ್ಶನವನ್ನು ಏರ್ಪಡಿಸಿದ್ದು ಅವರಿಗೆ ಕನ್ನಡ ವಾಹಿನಿ ಸಲ್ಲಿಸಿದ ಶ್ರದ್ಧಾಂಜಲಿ ಎಂದೇ ಹೇಳಬಹುದು. ಕನ್ನಡ ನಾಡು ನುಡಿಗಾಗಿ ತಮ್ಮದೇ ಆದ ಕೊಡುಗೆ ನೀಡಿದ ಮಹನೀಯರನ್ನು ನೆನಪಿಸಿಕೊಳ್ಳುವಂತೆ ಮಾಡಿದ್ದು ತುಂಬಾ ಆಪ್ತವೆನಿಸಿತು.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

## ಪ್ರಬುದ್ಧ ನಿರೂಪಣೆ

ಕನ್ನಡ ವಾಹಿನಿಗಳ ಗಾಯನ ಕಾರ್ಯಕ್ರಮಗಳಲ್ಲಿ ನಿರೂಪಣೆ ಒಂದು ಪ್ರಮುಖ ಭಾಗ. ಆದರೆ, ಕೆಲವು ನಿರೂಪಕರ ಸಪ್ತಸ್ವರ ಅರಚಾಟ, ಆರ್ಭಟ, ಚೀತ್ಕಾರಗಳೇ ನಿರೂಪಣೆ ಎನ್ನುವಂತಾಗಿಬಿಟ್ಟಿದೆ. ಇನ್ನು ಕೆಲವು ನಿರೂಪಕರ ಕರ್ನಾಟಕದ ಹಾಡುಗಳ ಮಧ್ಯೆಯೇ ಅಸಂಬದ್ಧ ಪ್ರಲಾಪ, ಅವಿವೇಕದ ಪ್ರಸ್ತಾಪಗಳು ಮಾರ್ದನಿಸುತ್ತವೆ. ಇನ್ನೋರ್ವ ಚಂದದ ಗಾನಗಳ ನಡುವೆ ದಂಪತಿ ನಿರೂಪಕರಿಗೆ ನುಲಿಯುವಿಕೆಯೇ ‘ಅಧಿಕ ಚಿಹ್ನೆ’ ಯಾಗಿ ಪರಿಣಮಿಸಿರುವುದು ವಿಪರ್ಯಾಸ.

ಇವೆಲ್ಲ ಹೊರತಾಗಿ ಈಗ ಪುನರಾರಂಭವಾಗಿರುವ ‘ಮಧುರ ಮಧುರವೀ ಮಂಜುಳ ಗಾನ’ ಕಾರ್ಯಕ್ರಮ ನಿರೂಪಕರಾಗಿರುವ ಎನ್. ಎಸ್. ಶ್ರೀಧರಮೂರ್ತಿಯವರ ಪರಿಪಕ್ವತೆಯ, ಪರಿಶುದ್ಧ ಕನ್ನಡದ ನಿರರ್ಗಳ ನಿರೂಪಣೆ ಕಳಸಪ್ರಾಯವಾಗಿದೆ. ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಎಲ್ಲ ವಿಷಯಗಳ ನೈಪುಣ್ಯತೆ, ವಿಶ್ಲೇಷಣಾ ವೈಖರಿ ಸ್ತುತ್ಯಾರ್ಹ.

ಹಾಗೆಯೇ, ಈ ಹಿಂದೆ ಇದೇ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದ ಸಾರ್ಥವಳ್ಳಿ ನಾರಾಯಣ ಸ್ವಾಮಿಯವರಿಗೂ ಕನ್ನಡ ಚಿತ್ರರಂಗದ ಬಗ್ಗೆ ಇದ್ದ ಅಗಾಧ ಮಾಹಿತಿ, ಅವರ ನಿರೂಪಣೆ ಕೂಡ ಅನುಕರಣೀಯ. ಪ್ರವರ್ಧಮಾನಕ್ಕೆ ಬರುತ್ತಿರುವ ಹೊಸಬರು ಈ ಮಾರ್ಗವನ್ನು ಅನುಸರಿಸುತ್ತಾರಾ?

—ಶ್ರೀಧರ್, ಬೆಂಗಳೂರು

## ಹಾಸ್ಯವೂ ಇರಲಿ

ಕಲರ್ಸ್ ಕನ್ನಡಲದ ‘ನನ್ನರಸಿ ರಾಧೆ’ ಅತ್ಯುತ್ತಮ ಕಥೆ, ನಿರೂಪಣೆ, ನಟರ ಅಭಿನಯದಿಂದ ಮನಸೂರೆಗೊಂಡಿದೆ. ನಿರ್ದೇಶಕರು ಇದನ್ನು ಹೀಗೆ ನವಿರಾಗಿ ನಿರೂಪಿಸಲಿ. ಅತಿಯಾದ ಕ್ರೌರ್ಯ, ದುಷ್ಟತನ, ಉಪಕಥೆಗಳಿಗೆ ನಾನಾ ಉಪತಿರುವು ನೀಡಿ ಎಳೆಯುವುದು ಹಿಂಸೆ ಅನ್ನಿಸುತ್ತದೆ. ಇಂತಹ ಉಪ ಮಾರ್ಗದಿಂದ ಇದನ್ನು ಮುಕ್ತವಾಗಿಸಿ. ಮನೆ ಮಂದಿಯೆಲ್ಲ ಅರ್ಧಗಂಟೆಯಾದರೂ ಖುಷಿಯಿಂದ ನೋಡುವಂತೆ ಆಗಲಿ. ಹಾಸ್ಯವೂ ಇರಲಿ, ಜಾಸ್ತಿ ಕಣ್ಣೀರು ಬೇಡ.

—ಮಧುಸೂದನ್ ಬಿಯಸ್ ಬೆಂಗಳೂರು

## ವಾದ ವಿವಾದ ಗರಿಗೆದರಲಿ

ಕಲರ್ಸ್ ಸೂಪರ್‌ನ ‘ಮಗಳು ಜಾನಕಿ’ಯಲ್ಲಿ ಕೆಲ ವಾರಗಳಿಂದ ಶ್ಯಾಮಲಾ ಮನೆಯ ಆಸ್ತಿ ಪ್ರಲಾಪ ನೋಡಿ ಬೇಸರ ವಾಗುತ್ತಿದೆ. ಎಲ್ಲರಿಗೂ ಒಪ್ಪಿಗೆಯಾಗುವ ಪರಿಹಾರ ನೀಡಿ, ಆ ಪ್ರಕರಣಕ್ಕೆ ಇತಿಶ್ರೀ ಹಾಡಿ.

ಇನ್ನು ಈ ಉಪ ಚುನಾವಣೆ ವಿಷಯವೂ ಅಷ್ಟೇ. ಜಾನಕಿಯ ಬಾಯಿಂದ ಖಚಿತವಾಗಿ ಅಭಿಪ್ರಾಯ ಹೇಳಿಸಿ. ರಶ್ಮಿಯವರ ಪಾಡು ನೋಡಲು ಜಿಗುಪ್ಸೆ. ಈ ಎಲ್ಲದಕ್ಕೂ ಮೇಲಿನದಕ್ಕೆಲ್ಲ ಮಂಗಳ ಹಾಡಿ, ನಿಂತು ಹೋಗಿರುವ ಕೋರ್ಟ್ ದೃಶ್ಯಗಳು ಬರಲಿ.

—ಅರುಣ್ ಕೆ.ಎನ್., ಬೆಂಗಳೂರು

## ಸ್ಪರ್ಧೆ ಸಾರ್ವಜನಿಕವಾಗಿದ್ದರೆ!

ಝೀ ಕನ್ನಡದಲ್ಲಿ ವಾರದ ಕೊನೆಗೆ ಜೀನ್ಸ್ ಎನ್ನುವ ಕಾರ್ಯಕ್ರಮ ಇರುತ್ತದೆ. ಅವಳಿ–ಜವಳಿ ಗುರುತಿಸಿ ಬಹುಮಾನ ಗೆಲ್ಲುವ ಅವಕಾಶವನ್ನು ಅದೇ ವಾಹಿನಿಯ ನಟ– ನಟಿಯರಿಗೆ ನೀಡಲಾಗುತ್ತದೆ. ಇದು ಪ್ರೇಕ್ಷಕರಲ್ಲಿ ಆಸಕ್ತಿ ಮೂಡಿಸಿದೆ. ಆದರೆ ಇಲ್ಲಿ ಜನಸಾಮಾನ್ಯರಿಂದ ಈ ಆಟವನ್ನು ಆಡಿಸಿ ಹಣ ಗೆಲ್ಲುವ ಅವಕಾಶ ನೀಡಿದರೆ ಅವರಿಗೂ ಉಪಯೋಗವಾಗಬಹುದು.

ಮಾತ್ರವಲ್ಲದೆ ನಟ ನಟಿಯರೂ ಜೊತೆಗಿದ್ದು ಈ ಕಾರ್ಯಕ್ರಮದ ಶೀರ್ಷಿಕೆಯನ್ನು ಜೀನ್ಸ್ ಬದಲು ವಂಶವಾಹಿನಿಯೆಂದೂ, ನಿರೂಪಕಿ ಬಳಸುವ ಸ್ವಾಪ್ ಪದವನ್ನು ವಿನಿಮಯವೆಂದೂ ಕನ್ನಡೀಕರಿಸಿದರೆ ಇಂಥ ಕನ್ನಡ ಕಾರ್ಯಕ್ರಮಕ್ಕೆ ಸಾರ್ಥಕತೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಸಹ್ಯ ಇರಬೇಕು

ಕನ್ನಡ ಕಲರ್ಸ್‌ನ ‘ಮಂಗಳಗೌರಿ ಮದುವೆ’ಯಲ್ಲಿ ಅವಳು ಇರುವ ಗಂಡನ ಮನೆಯಲ್ಲಿ ಅಣ್ಣನ ಹೆಂಡತಿ ಹಾಗೂ ಒಬ್ಬಳು ದಡೂತಿ ಇಬ್ಬರು ವಿನಾ ಕಾರಣ ಪ್ರತಿನಿತ್ಯ ಮಂಗಳಗೌರಿಗೆ ಹಿಂಸೆ ಕೊಡುವದು ನೆಡೆದೇ ಇರುತ್ತದೆ. ಅದರಲ್ಲೂ ಆ ದಡೂತಿ ಹೆಂಗಸು ವಿಚಿತ್ರವಾಗಿ ಕೈ ಹಾಗೂ ದೇಹವನ್ನು ಆಡಿಸುವುದು ವಿಪರೀತವಾಗಿ ನೋಡಲು ತುಂಬಾ ಹಿಂಸೆಯಾಗುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು